ಇ. ಯಾವುದೇ ಅನುದಾನವನ್ನು 2005–06ನೇ ಸಾಲಿನಲ್ಲಿ ಒದಗಿಸಿರುವುದಿಲ್ಲ.

ಈ. ಉದ್ಭವಿಸುವುದಿಲ್ಲ.

259 (445) ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ) ಶ್ರೀ ಎನ್.ಚಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬಸವನ ಬಾಗೇವಾಡಿಯಲ್ಲಿ ಬಸ್ ಘಟಕದ ನಿರ್ಮಾಣದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗಿದೆ;

ಆ. ನಿರ್ಮಾಣ ಕಾಮಗಾರಿಯನ್ನು ಗೊತ್ತು ಪಡಿಸಿದ ಯಾವ ಕಾಲಮಿತಿಯೊಳಗೆ ಪೂರ್ಣ ಗೊಳಿಸಬೇಕಾಗಿತ್ತು;

ಇ. ನಿರ್ಮಾಣ ಕೆಲಸವು ಈಗ ಯಾವ ಹಂತದಲ್ಲಿದೆ;' ನಿರ್ಮಾಣ ಕೆಲಸವು ವಿಳಂಬವಾಗಲು ಕಾರಣವೇನು;

ಈ. ನಿರ್ಮಾಣ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಉ. ಈ ಕೆಲಸಕ್ಕಾಗಿ ನೀಡಿರುವ ಅನುದಾನ ವೆಷ್ಟು;

ಊ. ಸದರಿ ಕಾಮಗಾರಿಯನ್ನು ಯಾರೂ ನಿರ್ವಹಿಸುತ್ತಿದ್ದಾರೆ?

ಶ್ರೀ ಎನ್.ಚಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು)

ಅ. ಜುಲೈ 2003ರಂದು ಪ್ರಾರಂಭಿಸಲಾಯಿತು.

ಆ. ಮಳೆಗಾಲವನ್ನು ಹೊರತುಪಡಿಸಿ, 9 ತಿಂಗಳ ಕಾಲಮಿತಿಯಲ್ಲಿ ಸಂಪೂರ್ಣ ಗೊಳಿಸಬೇಕಾಗಿತ್ತು.

ಇ. ಬಸ್ ಘಟಕದ ಮುಖ್ಯ ಕಟ್ಟಡದ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಕ್ಲಿಷ್ಟಕರವಾಗಿದ್ದರಿಂದ.

ಈ. ಮೇ 2006ರ ಅಂತ್ಯದೊಳಗೆ.

ಉ. ರೂ.68.00 ಲಕ್ಷಗಳು.

ಊ. ಶ್ರೀ ಬಿ.ಬಿ.ಪಾಟೀಲ್, ಒಂದನೇ ದರ್ಜೆ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು.